# ಪುರುಷರಿಗೂ ಏನಾದರೂ ಅರಿವು ದೊರೆಯಬಹುದೇನೋ

**ಸಾಲ್ಗೆ ಹನ್ಸದಾ | ಸಂತಾಲಿ**

1 ಬರವಣಿಗೆ ಎಂದರೇನು ಎಂದು ಒಂದು ಮಾತಿನಲ್ಲಿ ಹೇಳಲು ತೋಚುವುದಿಲ್ಲ ನನಗೆ. ಆದರೆ ನಾನು ಮಕ್ಕಳಿಗೆ ಪಾಠ ಮಾಡಲು ಅನೇಕ ಕಡೆ ತರಬೇತಿ ಪಡೆದಿದ್ದೇನೆ. ಇವರೊಡನೆ ಹೇಗೆ ಮಾತನಾಡಿದರೆ ಚೆನ್ನಾಗಿರುತ್ತದೆ, ಎಂತಹ ಲೇಖನವನ್ನು ಬರೆದರೆ ಇವರನ್ನು ತಲುಪಬಹುದು, ಯಾವ ರೀತಿ ಪ್ರೆಸೆಂಟೇಷನ್ ಅನ್ನು ಸಿದ್ಧಪಡಿಸಿದರೆ ಇವರಿಗೆ ಚೆನ್ನಾಗಿ ಅರ್ಥವಾಗುತ್ತದೆ ಎಂದು ಯೋಚಿಸುತ್ತ, ಹಾಗೆ ಬರೆಯುತ್ತ ಬರೆಯುತ್ತ ನಾನು ಲೇಖಕಿ ಅನ್ನಿಸಿಕೊಂಡೆ. ನನ್ನ ಪಾಲಿಗೆ, ಸಂತಾಲಿ ಭಾಷೆಯಲ್ಲಿ ಸಮಾಜದೊಡನೆ ಸಂವಹನ ಮಾಡಲು ಇರುವ ಮಾಧ್ಯಮದ ಮುಂದಿನ ಹಂತವೇ ಈ ಬರವಣಿಗೆ ಅಥವಾ ಸಾಹಿತ್ಯ ಕ್ಷೇತ್ರವಾಗಿದೆ.

2 ಮಹಿಳೆ ಎನ್ನುವ ಕಾರಣಕ್ಕೂ ಸಂತಾಲಿ ಭಾಷೆಯಲ್ಲಿ ಸಾಹಿತಿ ಆಗಿರುವುದಕ್ಕೂ ನಾನು ಸಂಬಂಧ ಗುರುತಿಸಲಾರೆ. ನನ್ನ ಅನುಭವಗಳನ್ನು ಬರೆಯುತ್ತಾ ಸಾಗಿರುವೆ. ಈ ಬರವಣಿಗೆಯಿಂದ ನನ್ನಂತಹ ಮಹಿಳೆಯರಿಗೆ ಅನುಕೂಲವಾಗಬಹುದು, ಪುರುಷರಿಗೂ ಏನಾದರೂ ಅರಿವು ದೊರೆಯಬಹುದೇನೋ.

3 ಹಿಂದಿನ ತಲೆಮಾರಿನ ಲೇಖಕಿಯರ ಸವಾಲುಗಳು ಮತ್ತು ಇಂದಿನ ತಲೆಮಾರಿನ ಲೇಖಕಿಯರ ಸಮಸ್ಯೆಗಳು ಭಿನ್ನವಾಗಿವೆ. ಆದರೆ, ಸರಿಯಾಗಿ ಯೋಚಿಸಿದರೆ ಆದ್ಯತೆಯ ವಿಚಾರ ಇನ್ನೂ ಬದಲಾಗಿಲ್ಲ. ಪುರುಷ ಪ್ರಧಾನ ಸಮಾಜದಲ್ಲಿಯೇ ಇನ್ನೂ ಇದ್ದೇವೆ ನಾವು. ಅವರ ಹೆಸರಿನ ಹಿಂದೆಯೇ ನಮ್ಮ ಹೆಸರನ್ನು ಹಾಕುತ್ತಾರಲ್ಲವೇ. ನಮ್ಮದು ಕೃಷಿ ಪ್ರಧಾನ ಪ್ರದೇಶವಾದ್ದರಿಂದ ಮಹಿಳೆಯರು ಪುರುಷರನ್ನು ಅವಲಂಬಿಸಿಯೇ ಮುನ್ನಡೆಯುವುದು ಅನಿವಾರ್ಯವಾಗಿದೆ. ಹಾಗಾಗಿ ಸವಾಲುಗಳು ಅಷ್ಟೇ ಕಠಿಣವಾಗಿ ಇನ್ನೂ ಉಳಿದುಕೊಂಡಿವೆ ಎನಿಸುತ್ತದೆ. ತೊಡಕುಗಳಿದ್ದಾಗ ಮುನ್ನುಗ್ಗಿ ನಡೆಯುವುದು ತುಂಬಾ ಮುಖ್ಯ. ನಾವು ಮನೋಬಲ ಕಳೆದುಕೊಳ್ಳಬಾರದಷ್ಟೆ. ವಾಸ್ತವವಾಗಿ, ಹಾಗೆ ಮುನ್ನುಗ್ಗಿ ನಡೆಯುವ, ಎದುರಿಸುವ ಸಾಮರ್ಥ್ಯ ಮಹಿಳೆಯರಿಗೆ ಹೆಚ್ಚೇ ಇದೆ. ಪುರುಷರಿಗಿಂತ ಮುಂದೆ ಸಾಗುವುದು ಮಹಿಳೆಯರಿಂದ ಸಾಧ್ಯ.

4 ನಾನು ಸಂತಾಲ್ ಸಮುದಾಯದ ಹುಡುಗಿ. ಅದೇ ಭಾಷೆಯಲ್ಲಿ ಮಾತನಾಡುವುದು, ಬರೆಯುವುದು ನನಗಿಷ್ಟ. ಈ ಸಂತಾಲಿ ಭಾಷೆ ಬಹಳ ಬಿಕ್ಕಟ್ಟಿನಲ್ಲಿದೆ. ಆದರೆ, ಈ ಭಾಷೆ ಬಿಕ್ಕಟ್ಟಿನಲ್ಲಿದೆ ಎಂಬ ಕಾರಣಕ್ಕೆ ನಾನು ಈ ಭಾಷೆಯನ್ನು ಆಯ್ಕೆ ಮಾಡಿಕೊಂಡಿಲ್ಲ. ಇದರಲ್ಲಿ ನಾನು ಹೃದಯದಿಂದ ಬರೆಯಬಲ್ಲೆ. ಆತ್ಮವಿಶ್ವಾಸ ಹೆಚ್ಚುತ್ತದೆ. ನಾನು ಹಿಂದಿಯಲ್ಲಿಯೂ ಚೆನ್ನಾಗಿ ಬರೆಯಬಲ್ಲೆ. ಬರೀತಿದ್ದೇನೆ.